5



# ಹೊರಾಂಗಣ

## ಹೆಚ್ಚು - ಕಡಿಮೆ - ಸಮ (1-9)

92

**ಉದ್ದೇಶ :** 1 ರಿಂದ 9ರ ವರಗಿನ ಅಂಕಿಗಳನ್ನು ಬಳಸಿ ಹೆಚ್ಚು ಕಡಿಮೆ ಸಮ ಕಲ್ಪನೆ ಮಾಡಿಸುವುದು.

**ಕಲಿಸುವ ಕ್ರಮ :**

1. ಮಕ್ಕಳನ್ನು ತರಗತಿಯ ಹೊರಗೆ ಕರೆದುಕೊಂಡು ಹೋಗಿ 2 ವೃತ್ತಗಳನ್ನು ಹಾಕಲು ಹಿರಿಯ ವಿದ್ಯಾರ್ಥಿಗೆ ಸೂಚನೆ ನೀಡುವುದು.

2. ಈ ಹಂತಕ್ಕೆ ಬಂದ ವಿದ್ಯಾರ್ಥಿಗೆ ತಿಳಿಸುತ್ತಾ 2 ವೃತ್ತಗಳಲ್ಲಿ ಐದು, ಐದು ವಿದ್ಯಾರ್ಥಿಗಳನ್ನು ನಿಲ್ಲಿಸುವಂತೆ ತಿಳಿಸುವುದು.

3. ಉಳಿದ ವಿದ್ಯಾರ್ಥಿಗಳು ಚಟುವಟಿಕೆ ಗಮನಿಸುತ್ತಿರಲಿ.

4. ಎರಡೂ ವೃತ್ತದಲ್ಲಿರುವ ವಿದ್ಯಾರ್ಥಿಗಳನ್ನು ಮತ್ತೊಮ್ಮೆ ಎಣಿಸಿ ಖಾತ್ರಿ ಪಡಿಸಿ ಕೊಳ್ಳುವುದು.

5. ಈ ಹಂತಕ್ಕೆ ಬಂದ ವಿದ್ಯಾರ್ಥಿಯನ್ನು ಪ್ರಶ್ನಿಸಿ ಪ್ರತೀ ಗುಂಪಿನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಎಂದು ಕೇಳಿ ಎರಡೂ ವೃತ್ತದಲ್ಲಿರುವ ವಿದ್ಯಾರ್ಥಿಗಳು ಸಮವಾಗಿದ್ದಾರೆಂಬ ಕಲ್ಪನೆ ನೀಡುವುದು.

6. ನಂತರ 1ನೆ ಗುಂಪಿನಿಂದ 2 ವಿದ್ಯಾರ್ಥಿಗಳನ್ನು 2ನೇ ಗಂಪಿಗೆ ಸೇರಿಸುವಂತೆ ತಿಳಿಸಿ, ಪ್ರಶ್ನಿಸಿ. ಯಾವ ವೃತ್ತದಲ್ಲಿ ಹೆಚ್ಚು ವಿದ್ಯಾರ್ಥಿಗಳಿದ್ದಾರೆ ಯಾವ ವೃತ್ತದಲ್ಲಿ ಕಡಿಮೆ ವಿದ್ಯಾರ್ಥಿಗಳಿದ್ದಾರೆ ಎಂದು ಕೇಳುತ್ತ ಹೆಚ್ಚು ಕಡಿಮೆ ಸಮದ ಕಲ್ಪನೆ ನೀಡುವುದು.

**ಸೂಚನೆ :** ಇದೇ ರೀತಿ ಬೇರೆ ಬೇರೆ ಸಂಖ್ಯೆಯ ವಿದ್ಯಾರ್ಥಿಗಳನ್ನು ಬಳಸಿ ಹೆಚ್ಚು ಕಡಿಮೆ, ಸಮ ಕಲ್ಪನೆ ನೀಡುವುದು.

5



# ಹೆಚ್ಚು - ಕಡಿಮೆ - ಸಮ

**93**

**ಉದ್ದೇಶ :** ಒಂದರಿಂದ ಒಂಬತ್ತರ ಒಳಗಿನ ಅಂಕಿಗಳನ್ನು ಬಳಸಿ ಹೆಚ್ಚು, ಕಡಿಮೆ, ಸಮ ಕಲ್ಪನೆ ಮೂಡಿಸುವುದು.

**ಸಾಮಗ್ರಿ :** ಹುಣಸೆ ಬೀಜಗಳು, ಮಣಿಗಳು, ಕಲ್ಲುಗಳನ್ನು ಇತ್ಯಾದಿಗಳು. 1 ರಿಂದ 9 ರವರೆಗಿನ ರಬ್ಬರ್ ಅಂಕಿಗಳು ಮತ್ತು ಮಿಂಚು ಪಟ್ಟಿಗಳು.

**ಕಲಿಸುವ ಕ್ರಮ :**

1. ಕೊಟ್ಟಿರುವ ರಬ್ಬರ್ ಅಂಕಿಗಳಲ್ಲಿ ಯಾವುದಾದರೂ ಎರಡು ಅಂಕಿಗಳನ್ನು ತೆಗೆದುಕೊಂಡು ನೆಲದ ಮೇಲೆ ಇಡುವುದು.
2. ಅಂಕಿಗಳಷ್ಟೇ ಬೀಜ/ಕಲ್ಲುಗಳನ್ನು ಅಂಕಿಯ ಮೇಲೆ ಇಡುವುದು.
3. ಈ ಎರಡರಲ್ಲಿ ಯಾವುದು ಹೆಚ್ಚು ಯಾವುದು ಕಡಿಮೆ ಎಂದು ಪ್ರಶ್ನಿಸಿ ಉತ್ತರ ಪಡೆಯುವುದು.




4. ಎರಡು ಗುಂಪಿನಲ್ಲಿ ಸಮ ಅಂಕಿಯ ವಸ್ತುಗಳಿರುವಂತೆ ಮಾಡಿ ಸಮದ ಕಲ್ಪನೆ ಮೂಡಿಸುವುದು.




**ಶಿಕ್ಷಕರ ಗಮನಕ್ಕೆ :**

1. '>' '<' '=' ಚಿನ್ಹೆಯನ್ನು ಪರಿಚಯಿಸಿ ಬಳಸುವ ಕ್ರಮವನ್ನೂ ತಿಳಿಸಿದ ನಂತರ ಮಕ್ಕಳಿಂದ ಮಾಡಿಸುವುದು.
2. ಮೇಲೆ ನೀಡಿರುವ ಕಲಿಸುವ ಕ್ರಮದಂತೆ ವಿದ್ಯಾರ್ಥಿಗೆ ಅನೇಕ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

5



# ಮೌಖಿಕ ಲೆಕ್ಕಗಳು

## ಹೆಚ್ಚು - ಕಡಿಮೆ - ಸಮ (1-9)

**100**

**ಸೂಚನೆ:**

1. ಶಿಕ್ಷಕರು ಸೂಚಿಸಿದ ವಿದ್ಯಾರ್ಥಿಯು ಈ ಹಂತಕ್ಕೆ ಬಂದಿರುವ ವಿದ್ಯಾರ್ಥಿಗೆ ಕೆಳ ಕಾಣಿಸಿದ ಒಂದೊಂದೇ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.
2. ಉತ್ತರಗಳು ಸರಿ/ತಪ್ಪು ಇದ್ದಾಗ್ಯೂ ಶಿಕ್ಷಕರಿಗೆ ವರದಿ ಮಾಡುವುದು.

1. ಶಂಕರನ ಬಳಿ 8 ಗೋಲಿಗಳಿವೆ. ರವಿಯ ಬಳಿ 6 ಗೋಲಿಗಳಿವೆ. ಹಾಗಾದರೆ ಯಾರ ಬಳಿ ಹೆಚ್ಚು ಗೋಲಿಗಳಿವೆ ?

2. ಲತಾಳು 6 ಬಳೆಗಳನ್ನು ರಮಾಳು 8 ಬಳೆಗಳನ್ನು ಹಾಕಿ ಕೊಂಡಿದ್ದಾರೆ. ಹಾಗಾದರೆ ಕಡಿಮೆ ಬಳೆಗಳನ್ನು ಹಾಕಿ ಕೊಂಡವರು ಯಾರು ?

3. ತಾಯಿಯು 9 ರೊಟ್ಟಿಗಳನ್ನು ಮಾಡಿದ್ದಳು ಅದರಲ್ಲಿ ಸುಮಳಿಗೆ 2 ರೊಟ್ಟಿಗಳನ್ನೂ, ಪ್ರಜ್ವಲ್‌ನಿಗೆ 2 ರೊಟ್ಟಿಗಳನ್ನೂ ಹಾಗೂ ಆದರ್ಶನಿಗೆ 3 ರೊಟ್ಟಿಗಳನ್ನು ತಿನ್ನಲು ಕೊಟ್ಟಳು. ಹಾಗಾದರೆ ಯಾರಿಗೆ ಸಮವಾಗಿ ರೊಟ್ಟಿ ಕೊಟ್ಟಳು.

5



# ಹೊರಾಂಗಣ

## ಏರಿಕೆ - ಇಳಿಕೆ (1- 9)

101

**ಸೂಚನೆ :** ಶಿಕ್ಷಕರು ಕಾರ್ಡಿನಲ್ಲಿರುವ ಸೂಚನೆಯಂತೆ ಮಕ್ಕಳನ್ನು ಬಳಸಿಕೊಂಡು ಚಟುವಟಿಕೆ ಮಾಡಿಸುವುದು.

**ಉದ್ದೇಶ :** ಏರಿಕೆ ಮತ್ತು ಇಳಿಕೆ ಕ್ರಮ ಪರಿಚಯಿಸುವುದು.

**ಕಲಿಸುವ ಕ್ರಮ :**

1. ತರಗತಿಯಲ್ಲಿರುವ ಮಕ್ಕಳಲ್ಲಿ ಗಿಡ್ಡವಾಗಿರುವ ಮಗುವನ್ನು ನಿಲ್ಲಿಸಿ ಅವನ ಎಡಬದಿಗೆ ಅವನಿಗಿಂತ ಎತ್ತರವಾಗಿರುವ ಮಕ್ಕಳನ್ನು ಅನುಕ್ರಮವಾಗಿ ನಿಲ್ಲಿಸುತ್ತಾ ಏರಿಕೆ ಕ್ರಮ ಪರಿಚಯಿಸುವುದು.



2. ತರಗತಿಯಲ್ಲಿರುವ ಮಕ್ಕಳಲ್ಲಿ ಎತ್ತರವಾಗಿರುವ ಮಗುವನ್ನು ನಿಲ್ಲಿಸಿ ಅವನ ಎಡಬದಿಗೆ ಅವನಿಗಿಂತ ಎತ್ತರದಲ್ಲಿ ಕಡಿಮೆ ಇರುವ ಮಕ್ಕಳನ್ನು ಅನುಕ್ರಮವಾಗಿ ನಿಲ್ಲಿಸುತ್ತ ಇಳಿಕೆ ಕ್ರಮ ಪರಿಚಯಿಸುವುದು.



**ಸೂಚನೆ :** ಇದೇ ರೀತಿ ಚಟುವಟಿಕೆಯನ್ನು ಹಲವು ಬಾರಿ ಮಾಡಿಸುತ್ತಾ ಏರಿಕೆ ಎಂದರೆ ಹೆಚ್ಚುತ್ತಾ ಹೋಗುವುದು ಇಳಿಕೆ ಎಂದರೆ ಕಡಿಮೆಯಾಗುತ್ತಾ ಹೋಗುವುದು ಎಂದು ಮನವರಿಕೆ ಮಾಡುವುದು.

5



# ಏರಿಕೆ - ಇಳಿಕೆ

102

**ಉದ್ದೇಶ** : 1 ರಿಂದ 9 ರವರೆಗಿನ ಅಂಕಿ ಸಂಖ್ಯೆಗಳನ್ನು ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಬರೆಯಲು ಕಲಿಸುವುದು.

**ಸಾಮಗ್ರಿ** : 1 ರಿಂದ 9ರವರೆಗಿನ ಸಂಖ್ಯೆಗಳ ಮಿಂಚುಪಟ್ಟಿಗಳು.

**ಕಲಿಸುವ ಕ್ರಮ :**

1. ಡಬ್ಬದಲ್ಲಿರುವ ಮಿಂಚು ಪಟ್ಟಿಗಳಲ್ಲಿ ತಲಾ 4 ಮಿಂಚು ಪಟ್ಟಿಗಳನ್ನು ತೆಗೆದುಕೊಳ್ಳಲು ಮಕ್ಕಳಿಗೆ ತಿಳಿಸುವುದು.
2. ನಾಲ್ಕು ಮಿಂಚುಪಟ್ಟಿಗಳಲ್ಲಿ ಕನಿಷ್ಟ ಬೆಲೆಯ ಮಿಂಚುಪಟ್ಟಿಗಳನ್ನು ಗುರ್ತಿಸಿ ಅದರ ಮುಂದೆ ಹೆಚ್ಚು ಬೆಲೆಯ ಮಿಂಚುಪಟ್ಟಿಗಳನ್ನು ಏರಿಕೆ ಕ್ರಮದಲ್ಲಿ ಜೋಡಿಸುತ್ತ ಹೇಳಿಸುವ ಮತ್ತು ಬರೆಯುವ ಚಟುವಟಿಕೆ ಮಾಡಿಸುವುದು. ಇದೇ ರೀತಿ ಹಲವು ಚಟುವಟಿಕೆ ಮಾಡಿಸುತ್ತ ಏರಿಕೆ ಎಂದರೆ ಹೆಚ್ಚಾಗುತ್ತದೆ ಎಂಬ ಅರಿವನ್ನು ಮೂಡಿಸುವುದು.
3. ಇದೇ ರೀತಿಯ ಚಟುವಟಿಕೆಯನ್ನು ವಿರುದ್ಧ ಕ್ರಿಯೆಯಲ್ಲಿ ಮಾಡಿಸುತ್ತ ಇಳಿಕೆ ಕ್ರಮದ ಪರಿಚಯ ಮಾಡಿಸುವುದು.

**ಶಿಕ್ಷಕರ ಗಮನಕ್ಕೆ :**

1. ಈ ರೀತಿಯ ಹಲವು ಚಟುವಟಿಕೆಗಳನ್ನು ಮಾಡಿಸುವುದು.
2. ಏರಿಕೆ - ಇಳಿಕೆ ಕ್ರಮದ ಪರಿಕಲ್ಪನೆ ಮೂಡಿಸಿದ ನಂತರ ಹಲವು ಸಮಸ್ಯೆಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

5



# ಆಟ

## ಏರಿಕೆ – ಇಳಿಕೆ

# 105

**ಸಾಮಗ್ರಿ :** 1 ರಿಂದ 9ರ ವರೆಗಿನ ಅಂಕಿಗಳ 2 ಸೆಟ್ ಮಿಂಚುಪಟ್ಟಿಗಳು.

**ಸೂಚನೆ :** 1 ರಿಂದ 9ರ ವರೆಗಿನ ಅಂಕಿಗಳ ಮಿಂಚುಪಟ್ಟಿಗಳನ್ನು ತಯಾರಿಸಿ ಒಂದು ಡಬ್ಬದಲ್ಲಿ ಹಾಕಿಟ್ಟುಕೊಳ್ಳುವುದು. ಈ ಹಂತಕ್ಕೆ ಬಂದ ವಿದ್ಯಾರ್ಥಿಗಳಿಗೆ ತಲಾ 6 ಮಿಂಚುಪಟ್ಟಿಗಳನ್ನು ತೆಗೆದುಕೊಂಡು ಏರಿಕೆ ಮತ್ತು ಇಳಿಕೆ ಬೋರ್ಡಿನಲ್ಲಿ ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಜೋಡಿಸಲು ತಿಳಿಸುವುದು.

| | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | | | | | | | 9 | 9 | | | | | | | | |
| | | | | | | | 8 | | | 8 | | | | | | | |
| | | | | | | 7 | | | | | 7 | | | | | | |
| | | | | | 6 | | | | | | | 6 | | | | | |
| | | | | 5 | | | | | | | | | 5 | | | | |
| | | | 4 | | | | | | | | | | | 4 | | | |
| | | 3 | | | | | | | | | | | | | 3 | | |
| | 2 | | | | | | | | | | | | | | | 2 | |
| 1 | | | | | | | | | | | | | | | | | 1 |

5



# ಹೊರಾಂಗಣ

## ಹಿಂದೆ-ಮುಂದೆ-ಮಧ್ಯೆ (1-9)

**106**

**ಸೂಚನೆ :** ಕಾರ್ಡ್‌ನಲ್ಲಿರುವ ಕಲಿಸುವ ಕ್ರಮದಂತೆ ಮಕ್ಕಳನ್ನು ಬಳಸಿಕೊಂಡು ಚಟುವಟಿಕೆ ಮಾಡಿಸುವುದು.

**ಉದ್ದೇಶ :** ನಿರ್ದಿಷ್ಟ ಸಂಖ್ಯೆಯ ಹಿಂದಿನ ಮತ್ತು ಮುಂದಿನ ಸಂಖ್ಯೆಯನ್ನು ಹೇಳುವ ಮತ್ತು ಅನುಕ್ರಮವಾಗಿ ಯಾವುದಾದರೂ ಮೂರು ಸಂಖ್ಯೆಗಳ ನಡುವಿನ ಸಂಖ್ಯೆಯನ್ನು ಹೇಳುವ ಸಾಮರ್ಥ್ಯ ಬೆಳೆಸುವುದು.

**ಕಲಿಸುವ ಕ್ರಮ :**

1. 9 ಮಕ್ಕಳನ್ನು ಸಾಲಾಗಿ ನಿಲ್ಲಿಸಿ 1 ರಿಂದ 9 ರವರೆಗೆ ಅಂಕಿಗಳನ್ನು ಹೇಳಿಸುವುದು. ಪ್ರತಿಯೊಬ್ಬರು ತಾವು ಹೇಳಿದ ಅಂಕಿಯನ್ನು ನೆನಪಿಟ್ಟು ಕೊಳ್ಳಲು ಹೇಳುವುದು.
2. ಶಿಕ್ಷಕರು 8 ಎಂದು ಹೇಳಿದಾಗ ಆ ಅಂಕಿಯನ್ನು ಹೇಳಿರುವ ವಿದ್ಯಾರ್ಥಿ ಅಂಕಿಯನ್ನು ಹೇಳುತ್ತಾ ಎದುರಿಗೆ ಬಂದು ನಿಲ್ಲುವಂತೆ ಸೂಚನೆ ನೀಡಿ ಚಟುವಟಿಕೆ ಮಾಡಿಸುವುದು.
3. ಈ ವಿದ್ಯಾರ್ಥಿಯ ಹಿಂದೆ 7 ಎಂದು ಹೇಳಿರುವ ಹಾಗೂ ಮಂದೆ 9 ಎಂದು ಹೇಳಿರುವ ವಿದ್ಯಾರ್ಥಿಗಳು ಅಂಕಿಯನ್ನು ಹೇಳುತ್ತ ಬಂದು ನಿಲ್ಲುವಂತೆ ಸೂಚನೆ ನೀಡಿ ಚಟುವಟಿಕೆ ಮಾಡಿಸುವುದು.

**ಸೂಚನೆ :** ಇದೇ ರೀತಿ ಬೇರೆ ಬೇರೆ ಸಂಖ್ಯೆಗಳಿಗುನುಗುಣವಾಗಿ ಮಕ್ಕಳನ್ನು ಬಳಸಿ ಚಟುವಟಿಕೆ ಮಾಡಿಸುವುದು.

5

# ಹಿಂದೆ - ಮುಂದೆ - ಮಧ್ಯೆ

## (1-9)

**107**

**ಉದ್ದೇಶ :** ನಿರ್ದಿಷ್ಟ ಸಂಖ್ಯೆಯ ಹಿಂದಿನ ಮತ್ತು ಮುಂದಿನ ಸಂಖ್ಯೆಯನ್ನು ಹೇಳುವ ಮತ್ತು ಅನುಕ್ರಮವಾಗಿ ಯಾವುದಾದರೂ ಮೂರು ಸಂಖ್ಯೆಗಳ ನಡುವೆ ಇರುವ ಸಂಖ್ಯೆಯನ್ನು ಹೇಳುವ ಮತ್ತು ಬರೆಯುವ ಸಾಮರ್ಥ್ಯ ಬೆಳೆಸುವುದು.

**ಸಾಮಗ್ರಿ :** 1 ರಿಂದ 9ರವರೆಗಿನ ಮಿಂಚುಪಟ್ಟಿಗಳು.

**ಕಲಿಸುವ ಕ್ರಮ :**

1. ಮಿಂಚುಪಟ್ಟಿಗಳ ಗುಂಪಿನಿಂದ ಒಂದೊಂದು ಮಿಂಚು ಪಟ್ಟಿ ತೆಗೆದುಕೊಳ್ಳಲು ವಿದ್ಯಾರ್ಥಿಗಳಿಗೆ ಸೂಚನೆ ನೀಡುವುದು.

2. ತಾವು ತೆಗೆದುಕೊಂಡ ಮಿಂಚುಪಟ್ಟಿಯಲ್ಲಿನ ಸಂಖ್ಯೆಯ ಹಿಂದಿನ ಸಂಖ್ಯೆಯನ್ನು ಮಿಂಚುಪಟ್ಟಿಯ ಗುಂಪಿನಿಂದ ತೆಗೆದು ಸೇರಿಸಲು ಹೇಳುವುದು.

3. ಅಂತೆಯೇ ಮೊದಲು ತೆಗೆದುಕೊಂಡ ಮಿಂಚುಪಟ್ಟಿಯಲ್ಲಿನ ಸಂಖ್ಯೆಯ ಮುಂದಿನ ಸಂಖ್ಯೆಯನ್ನು ಮಿಂಚುಪಟ್ಟಿಯ ಗುಂಪಿನಿಂದ ತೆಗೆದು ಸರಿಯಾದ ಜಾಗದಲ್ಲಿ ಇಡಲು ಹೇಳುವುದು ಮತ್ತು ಬರೆಸುವುದು.

**ಸೂಚನೆ :** ವಿದ್ಯಾರ್ಥಿಯು ತೆಗೆದುಕೊಂಡ ಮಿಂಚುಪಟ್ಟಿಯಲ್ಲಿರುವ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಅದರ ಮುಂದಿನ ಮತ್ತು ಹಿಂದಿನ ಸಂಖ್ಯೆಗಳನ್ನು ಮಕ್ಕಳಿಂದ ಹೇಳಿಸುವುದು ಮತ್ತು ನೋಟ್‌ಪುಸ್ತಕದಲ್ಲಿ ಬರೆಸುವುದು. ಈ ರೀತಿ ಹಲವು ಲೆಕ್ಕಗಳನ್ನು ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

5



# ಮೌಲ್ಯಮಾಪನ
## (ಹೆಚ್ಚು - ಕಡಿಮೆ - ಸಮ)

**110**

| ಸೂಚನೆ : ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಹೆಚ್ಚಿನ ಬೆಲೆಯ ಅಂಕಿಗೆ ವೃತ್ತ ಹಾಕು. | | ಸೂಚನೆ : ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಕಡಿಮೆ ಬೆಲೆಯ ಅಂಕಿಗೆ ವೃತ್ತ ಹಾಕು. | |
|---|---|---|---|
| 1 | 8 | 9 | 2 |
| 8 | 9 | 7 | 8 |
| 5 | 2 | 4 | 3 |
| 7 | 8 | 1 | 8 |
| 1 | 7 | 5 | 2 |
| 3 | 7 | 7 | 6 |
| 8 | 6 | 3 | 7 |
| 5 | 9 | 3 | 9 |
| 9 | 7 | 9 | 8 |

ಸೂಚನೆ : ಸಮ ಅಂಕಿಗೆ ವೃತ್ತ ಹಾಕು

| | | | |
|---|---|---|---|
| 8 | 8 | 6 | 8 |
| 3 | 6 | 5 | 5 |
| 1 | 1 | 7 | 6 |
| 3 | 2 | 9 | 9 |

5



# ಮೌಲ್ಯಮಾಪನ
## (ಏರಿಕೆ ಮತ್ತು ಇಳಿಕೆ)

**111**

| ಸೂಚನೆ : ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಏರಿಕೆ ಕ್ರಮದಲ್ಲಿ ಬರೆ. | ಸೂಚನೆ : ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಇಳಿಕೆ ಕ್ರಮದಲ್ಲಿ ಬರೆ. |
|---|---|
| 3, 6, 8, 4, 1 | 4 3 8 6 2 |
| 4, 5, 9, 7, 3 | 9 5 4 3 1 |
| 8, 3, 4, 5, 6 | 4 3 6 5 2 |
| 4, 5, 6, 7, 1 | 1 7 8 4 3 |
| 4 3, 1, 8 9 | 3 1 2 5 7 |
| 7, 3, 2, 9, 1 | 2 4 6 8 9 |
| 3, 9, 5, 4, 1 | 9 8 1 7 6 |
| 4, 9, 5, 8, 2 | 1 9 4 6 8 |
| 9, 3, 8, 4, 1 | 1 3 5 7 9 |
| 6, 3, 1, 4, 5 | 5 4 1 2 3 |
| 2, 6, 4, 3, 1 | 9 8 4 7 6 |